'ಹ್ಲೂ ಕಣೋ' ಎಂದ ಮಧು

'ಅವನ ರೆಸ್ಪಾನ್ಸ್ ಏನಿತ್ತು?' ಎಂದು ಕೇಳಿದೆ

'ಅವನು ನೋಯುತ್ತಾ ಕೂತಿದ್ದು ಆವಾಗಲೇ ನೋಡಿದ್ದು. ಆಮೇಲೆ, 'ಬಿಡೋ ಎಲ್ರೂ ಏನೋ ಹೀಗೆ ಮಾಡಿರ್ತಾರೆ. ದೊಡ್ಡೋರು ಮಣಗಟ್ಲೆ ತಿಂತಾರೆ. ಅಪರಂಜಿ ಚಿನ್ನ ಯಾರೂ ಇಲ್ಲ. ಹ್ಯೂಮನ್ ಅದು' ಎಂದು ಸಮಾಧಾನಿಸಿದ್ದ.

ನಾನು ಮಾತ್ರ ನನ್ನ ವಿಕ್ಟಿಮ್‌ಹುಡ್ ಪ್ರಚಾರ ಮಾಡ್ತಾ ಬಂದ ಕಾರಣ ಈಗಲೂ ಏನೋ ಅಷ್ಟಿಷ್ಟು ವ್ಯವಹಾರ ನಡಿತಿದೆ ಕಣೋ' ಎಂದ ಮಧು ವ್ಯಂಗ್ಯ ನಗೆಯಲ್ಲಿ.

ಎಲ್ಲೋ ನೋಡುತ್ತಿದ್ದ ಮಧು ತಟಕ್ಕನೆ ನನ್ನ ಕೈ ಹಿಡಿದು, 'ಕುಮಾರ್ ಬಿಟ್ಟರೆ ಇನ್ಯಾರಿಗೂ ಈ ಸತ್ಯ ಗೊತ್ತಿಲ್ಲ ಕಣೋ, ಫ್ಯಾಕ್ಟರಿಯೋರೂ ಕೇಸು ಮುಚ್ಚಾಕಿದ್ರು. ಕುಮಾರ್ ಹೊರಗೆ ಬಂದು ಇಲ್ಲಿ ಕೆಲಸ ಮಾಡ್ತಿದ್ರೆ ನಾನು ಕೈ ಜೋಡಿಸ್ತಿದ್ನಾ ಗೊತ್ತಿಲ್ಲ. ಆದ್ರೆ ಈಗ ಪೋಸ್ಟರ್ ಅಂಟಿಸೋಕಂತೂ ಗ್ಯಾರಂಟಿ ಹೋಗ್ತಿದ್ದೆ. ಅಷ್ಟು ಪ್ರಾಯಶ್ಚಿತ್ತ ಮಾಡ್ಕೊಳ್ದೇ ಇದ್ರೆ ಬದುಕಿ ಏನು ಪ್ರಯೋಜನ ಕೇಪಿ.'



ಓದುವಾಗ ಇದ್ದ ಇನೋಸೆನ್ಸ್ ಸಂಸಾರಕ್ಕೆ ಬೀಳ್ತಿದ್ದಂಗೆ ಆವಿಯಾಗಿ ಬಿಡುತ್ತೆ, ನೋಡು. ಅದು ಕಾಡೋದು ಆಮೇಲೆ ವಯಸ್ಸಾದ ಮೇಲೆ.

ಈಗ ನೋಡು ನನ್ನ ಮಗ ಆ ಫ್ಯಾಕ್ಟರಿನಲ್ಲಿ ಥೀ ಥೂ ಅಂತ ಉಗಿಸ್ಕೊಂಡ್ರೂ ಎಂಥಾ ಮುಖ್ಯ ಪೋಸ್ಟು ಗೊತ್ತಾ... ಅಂತ ಲೋಕಕ್ಕೆ ಸಾರ್ಕೊಂಡು ಬರ್ತಿದಾನೆ, ಸುಳ್ಳೆ...'

ನಾನು ದುಡೀತಿದ್ದ ಫ್ಯಾಕ್ಟ್ರೀನೂ ಸೇರಿ ಎಲ್ಲಾ ಫ್ಯಾಕ್ಟ್ರೀಲು ದೇವಸ್ಥಾನ ಇದೆ. ಅಲ್ಲಿಗೆ ಸಂಘಿ ಲೀಡರುಗಳು ಬಂದು ಸಂಸ್ಕೃತಿ ಮಣ್ಣಾಂಗಟ್ಟಿ ಅಂತ ಭಾಷಣ ಮಾಡ್ತಾರೆ. ಮ್ಯಾನೇಜ್‌ಮೆಂಟೂ ಫುಲ್ ಸಪೋರ್ಟು ಕೊಡ್ತಿದೆ. ಯೂನಿಯನ್ ಇಲ್ಲ ಕಣೋ. ಕಾರ್ಮಿಕ ಅಯ್ಯಪ್ಪ, ಗಣಪತಿ ಎಲ್ಲಾ ಇದೆ' ಎಂದ ಮಧು.

ನಾನೇನು ಹೇಳಲಿ.

'ನಾವು ಶ್ರಿಂಕಾಗಿ ಜಾಗ ಖಾಲಿ ಮಾಡ್ತಿದ್ದಂಗೆ ಅಲ್ಲೇನೋ ತುಂಬ್ಕೊಳ್ಳಲೇ ಬೇಕು. ವಿಜ್ಞಾನದ ನಿಯಮ. ಆದರೆ ಈ ಮಾಯಕದ ಭಂಗೀರಸ ತುಂಬ್ಕೊಳ್ಳುತ್ತೆ ಅಂತ ಗೊತ್ತಿರಬೇಕಿತ್ತು. ಕುಮಾರ ಏನೋ ಹಿಂದಕ್ಕೆ ಬಾರಲಾಗದೇ ತೀರ್ಕೊಂಡ ಕಣೋ ನಿಜ. ಆದರೆ ಬದುಕಿರೋ ನಾವು ಎಲ್ಲಾ ರಾಜಿಗೂ ಸಮರ್ಥನೆ ಹುಡ್ಕೊತಾ, ಸಮಯ ಸಿಕ್ಕಿದ್ರೆ ಅವನನ್ನೂ ಟೀಕೆ ಮಾಡ್ತಾ ಇರಬಾರದು ಕಣೋ... ಕನಿಷ್ಠ ಗಿಲ್ಟ್ ಆದರೂ ಇರಬೇಕು ಅಲ್ವಾ ಕೇಪಿ?' ಎಂದು ಮಧು ಹೇಳಿ ನಿಲ್ಲಿಸಿದ.

ಅವನ ಹರಿದ ಚಪ್ಪಲಿ. ಸವೆದ ಕಾಲರಿನ ಅಂಗಿಯನ್ನೇ ದಿಟ್ಟಿಸಿದೆ. ಬದುಕಲು ಹೆಣಗೋ ರಾಜಿ ಬೇರೆ, ಏಣಿಯ ಹವಣಿಕೆ ಬೇರೆ...

ನಾನು ಏನೂ ಹೇಳಲಿಲ್ಲ.

'ಏನೋ ಫೋನ್ ಬಂತು' ಅಂತ ಮಧು ಕಾಲ್ ರಿಸೀವ್ ಮಾಡಿ, ಹು, ಹು... ಅಂತಾ ತಲೆ ಆಡಿಸಿದ.

'ಹೋಗೋಣ, ಮನೆಗೋಗಿ ಆಮೇಲೆ ಸೇಲ್ ಡಿಟೈಲ್ ತೆಗೋಬೇಕು... ದಿನಾ ನಕ್ಷತ್ರಿಕನ ಹಾಗೆ ಹೋದರಷ್ಟೇ ವ್ಯವಹಾರ ಕಣೋ...' ಎಂದವನು, ನಾನು ಎದ್ದು ನಿಲ್ಲುತ್ತಿದ್ದಂತೆ, 'ಇರು ಇರು, ಒಂದು ಸೆಲ್ಫಿ ತೆಗೋತೀನಿ' ಎಂದ. ನಾನು ಸ್ವಲ್ಪ ನಗುವ ಪೋಸು ಕೊಟ್ಟರೆ ಅವನು ಊರಗಲ ನಗುವಿನ ಮೋರೆಯಲ್ಲಿ ಸೆಲ್ಫಿ ತೆಗೆದುಕೊಂಡ.

ಆಮೇಲೆ, 'ಆ ಕಾಲದಲ್ಲಿ ಸೆಲ್ಫಿ ಇರಲಿಲ್ಲ. ಇದ್ದಿದ್ರೆ ಈಗಿರೋ ಇವರ ತರ ದೊಡ್ಡೋರ ಜೊತೆ ಸೆಲ್ಫಿ ತೆಗೊಂಡು ಫೇಸ್‌ಬುಕ್ಕಲ್ಲಿ ಹಾಕಿ ಮಿಂಚಬೋದಿತ್ತು' ಎಂದ.

●